

ಮಾನಸ ಸರೋವರದಿಂದ ಕೈಲಾಸ ದರ್ಶನ

ದರ್ಶನ ಮಾಡಿದಷ್ಟೇ ಯಾತ್ರಿಗಳಿಗೆ ತೃಪ್ತಿ ನೀಡುತ್ತವೆ. ನೀರಿನಲ್ಲಿ ನಕ್ಷತ್ರಗಳಂತೆ ಹೊಳೆಯುವ ಕಿರಣಗಳು ಯಾತ್ರಿಗಳನ್ನು ಆಶೀರ್ವದಿಸುವಂತೆ ತೋರುತ್ತದೆ. ಇಲ್ಲಿಂದ ಕಾಣುವ ಕೈಲಾಸದ ಮನೋಹರ ನೋಟವು ಆ ಪರಮಾತ್ಮನ ಬಗ್ಗೆ ಶುದ್ಧಪ್ರೇಮಭಾವವು ಅವರ ಮನಸ್ಸನ್ನೆಲ್ಲ ತುಂಬುವಂತೆ ಮಾಡುತ್ತದೆ. ಆ ದೃಶ್ಯವು, "ನಮ್ಮ ಸುಖದಲ್ಲಿ ದುಃಖದಲ್ಲಿ ಭಗವಂತನು ಎಂದೆಂದಿಗೂ ನಮ್ಮೊಡನೆ ಇದ್ದಾನೆ" ಎಂಬ ಭಾವವನ್ನು ಯಾತ್ರಿಗಳಿಗೆ ನೀಡುತ್ತದೆ. ಅವರ ಭಾವವು ಸ್ನಿಗ್ಧವಾಗುತ್ತದೆ. ಅಲ್ಲಿನ ಪ್ರತಿಕ್ಷಣವನ್ನೂ ಅವರು ಗಾಢವಾಗಿ, ಪೂರ್ಣವಾಗಿ ಅನುಭವಿಸುತ್ತಾರೆ. ಕೈಲಾಸದ ದರ್ಶನ ಮತ್ತು ಮಾನಸ ಸರೋವರದ ಪುಣ್ಯಸ್ನಾನದಿಂದ ಅವರೆಲ್ಲರೂ ಮೈಮನಗಳೆರಡರಲ್ಲೂ ಪುಳಕಿತರಾಗಿದ್ದಾರೆ. ಈ ಶುಭಘಳಿಗೆಯು ಸಂಪನ್ನವಾಗುವ ಸಮಯ ಬಂದಿದೆ. ಸ್ನಾನದ ನಂತರ ಯಾತ್ರೆಯ ಮುಕ್ತಾಯ ಹೋಮವೊಂದನ್ನು ಆಚರಿಸಲಾಗುತ್ತದೆ. ಮಾನಸ ಸರೋವರದ ದಂಡೆಯ ಮೇಲೆ ಹೋಮ ನಡೆದ ನಂತರ, ಯಾತ್ರಿಗಳ ಮನಸ್ಸು ಆನಂದದಿಂದ, ತೃಪ್ತಿಯಿಂದ ತುಂಬಿಹೋಗುತ್ತದೆ. ತಮ್ಮ ಕನಸು ನನಸಾದ ಸಮಾಧಾನ ಅವರೆಲ್ಲರ ಮನಸ್ಸನ್ನು ಆವರಿಸುತ್ತದೆ.

ತಾವು ಎಸಗಿದ ಕರ್ಮಗಳಲ್ಲಿ ಕೈಲಾಸ, ಮಾನಸ ಸರೋವರದ ಯಾತ್ರೆಯೇ ಅತ್ಯಂತ ಉತ್ಕೃಷ್ಟವೆಂದು ಯಾತ್ರಿಗಳ ನಂಬಿಕೆ. ಭಗವಂತನ ಈ ಅಗಾಧ ಸೃಷ್ಟಿಯಲ್ಲಿ ತಾನು ಒಂದು ಅಣುಮಾತ್ರ ಎಂಬ ಅರಿವು ಪ್ರತಿಯೊಬ್ಬ ಯಾತ್ರಿಯಲ್ಲೂ ಉಂಟಾಗುತ್ತದೆ. ಅದು ಆ ದೇವಾಧಿದೇವನ ಬಗೆಗೆ ಕೃತಜ್ಞತೆ ಹಾಗೂ ನಮ್ರತೆಯ ಭಾವನೆಗೆ ಎಡೆಮಾಡಿಕೊಡುತ್ತದೆ. ಪ್ರತಿಯೊಬ್ಬ ಯಾತ್ರಿಯೂ ಈ ಅದ್ಭುತ ಅನುಭವವನ್ನು ಮತ್ತೆ ಮತ್ತೆ ಪಡೆಯಲು ಇಚ್ಛಿಸುತ್ತಾನೆ. ಈ ಕಷ್ಟಕರ ಯಾತ್ರೆಯನ್ನು ಮಾಡುವಂತೆ ಆ ದೇವನು ಎಲ್ಲರನ್ನೂ ಆಶೀರ್ವದಿಸಿ, ಸಮೃದ್ಧವಾಗಿ ಹರಸಲಿ ಎಂದು ಮನಸ್ಸಿನಲ್ಲಿಯೇ ಬೇಡಿಕೊಳ್ಳುತ್ತಾನೆ. ✦

### ಹೊಳೆನರಸೀಪುರದ ಅಧ್ಯಾತ್ಮಪ್ರಕಾಶ ಕಾರ್ಯಾಲಯದ ಶ್ರೀ ಸಚ್ಚಿದಾನಂದ ಅಧ್ಯಾತ್ಮವಿದ್ಯಾಲಯ

ಹೊಳೆನರಸೀಪುರದ ಅಧ್ಯಾತ್ಮ ಪ್ರಕಾಶ ಕಾರ್ಯಾಲಯದ ಅಂಗವಾಗಿರುವ ಈ ವಿದ್ಯಾಲಯದಲ್ಲಿ ಅಧ್ಯಾತ್ಮ ವಿದ್ಯಾ ಪ್ರಚಾರಕರನ್ನು ಸಜ್ಜುಗೊಳಿಸಲು ಮತತ್ರಯಗಳಿಗೆ ಒಪ್ಪುವ ಒಂದು ಅಭ್ಯಾಸಪದ್ಧತಿಯನ್ನು ಏರ್ಪಡಿಸಲಾಗಿದೆ. ಈ ಪದ್ಧತಿಯಲ್ಲಿ ಸಂಸ್ಕೃತ, ಇಂಗ್ಲಿಷ್, ಕನ್ನಡ – ಈ ಮೂರೂ ಭಾಷೆಗಳಲ್ಲಿರುವ ಗ್ರಂಥಗಳ ಮೂಲಕ ತತ್ತ್ವವಿಚಾರವನ್ನೂ, ಸಾಧನಕ್ರಮವನ್ನೂ ತಿಳಿಸಿಕೊಡಲಾಗುವುದು. ವಿದ್ಯಾಲಯದ ವ್ಯಾಪ್ತಿ ಇಡೀ ಭಾರತದೇಶಕ್ಕೆ ವ್ಯಾಪಿಸಿರುವುದರಿಂದ, ಬೋಧನಕ್ರಮದಲ್ಲಿ ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳನ್ನೇ ಪ್ರಧಾನವಾಗಿ ಉಪಯೋಗಿಸಲಾಗುತ್ತದೆ. ಅಭ್ಯಾಸದ ವಿಷಯಗಳು ಹೀಗಿವೆ: 1. ಉಪನಿಷತ್ತುಗಳು, ಭಗವದ್ಗೀತೆ, ಬ್ರಹ್ಮಸೂತ್ರ – ಈ ಪ್ರಸ್ಥಾನತ್ರಯವನ್ನು ದಕ್ಷಿಣದೇಶದಲ್ಲಿ ಪ್ರಚಾರವಿರುವ ಮತತ್ರಯದ ಪರಿಚಯದೊಂದಿಗೆ ಹೇಳಿಕೊಡಲಾಗುತ್ತದೆ. ಹಾಗೆಯೇ, ಹಿಂದೂಧರ್ಮದ ಇತಿಹಾಸ, ವೀರಶೈವ, ಆರ್ಯಸಮಾಜ, ಬ್ರಹ್ಮಸಮಾಜ– ಮುಂತಾದ ಪಂಥಗಳ ಸಂಕ್ಷಿಪ್ತ ಪರಿಚಯವೂ ಸೇರಿರುತ್ತದೆ. 2. ಅವೈದಿಕ ಮತಗಳಾದ ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ, ಪಾರ್ಸಿ, ಯಹೂದಿ ಮತಗಳ ಹಾಗೂ ಅವುಗಳ ಸ್ಥಾಪಕರ ಜೀವನಚರಿತ್ರೆಗಳನ್ನು ಪರಿಚಯಿಸಲಾಗುವುದು. 3. ಜಪ, ಪೂಜೆ, ಧ್ಯಾನ – ಮುಂತಾದ ಸಾಧನೆಗಳ ಮರ್ಮ ವನ್ನು ವೈದಿಕ ಪದ್ಧತಿಗೆ ಅನುಸಾರವಾಗಿ ತಿಳಿಸಿಕೊಡಲಾಗುವುದು. 4. ಪುರಾಣಪ್ರವಚನ, ಕೀರ್ತನೆ, ಉಪನ್ಯಾಸ – ಮುಂತಾದವುಗಳ ಕ್ರಮವನ್ನು ಹೇಳಿಕೊಡಲಾಗುವುದು. ಸಂಪರ್ಕಿಸಿ: ಅಧ್ಯಕ್ಷರು, ಅಧ್ಯಾತ್ಮಪ್ರಕಾಶ ಕಾರ್ಯಾಲಯ, ಹೊಳೆನರಸೀಪುರ, ಹಾಸನ ಜಿಲ್ಲೆ – 579 211; ದೂರವಾಣಿ: 08175–273820 ; ಮೊಬೈಲ್ : 9449342238



ಜಿ.ಎಸ್. ಜಯದೇವ

# ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ದೇವರು ಮತ್ತು ಧರ್ಮ

ವಿವೇಕಕಿರಣ

ಶ್ರೀರಾಮಕೃಷ್ಣರು ತಾಯಿ ಕಾಳಿಯೊಡನೆ ಮಾತನಾಡುತ್ತಿದ್ದರು, ಮಗುವಿನ ಹಾಗೆ. ಇವರ ಪದತಲದಲ್ಲಿ ಕುಳಿತು ಸತ್ಯಸಾಕ್ಷಾತ್ಕಾರ ಮಾಡಿಕೊಂಡ ಸ್ವಾಮಿ ವಿವೇಕಾನಂದರು ಹೀಗೆ ದೇವರೊಡನೆ ಮಾತನಾಡಿದ್ದುಂಟೇ? ಕಾಶ್ಮೀರದ ಕ್ಷೀರಭವಾನಿ ದೇವಸ್ಥಾನದಲ್ಲಿ ವಿದೇಶೀಯರ ದಾಳಿಯಿಂದ ಮುಕ್ಕಾಗಿದ್ದ ವಿಗ್ರಹಗಳನ್ನು ನೋಡಿ, "ತಾಯಿ, ಆಗ ನಾನು ಇದ್ದಿದ್ದರೆ ದಾಳಿಯಿಂದ ನಿನ್ನನ್ನು ರಕ್ಷಿಸುತ್ತಿದ್ದೆ" ಎಂದು ಅವರು ಮನಸ್ಸಿನಲ್ಲಿಯೇ ಭಾವಿಸಿಕೊಂಡರು. ಈ ಭಾವನೆಗೆ ಇಡೀ ಗುಡಿಯು ಶಬ್ದರೂಪದಲ್ಲಿ ಹೀಗೆ ಮಾರ್ದನಿಸಿತು: "ಮಗು, ನೀನು ನನ್ನನ್ನು ರಕ್ಷಿಸುತ್ತೀಯೋ, ನಾನು ನಿನ್ನನ್ನು ರಕ್ಷಿಸಬೇಕೋ." ಈ ಪ್ರಸಂಗವನ್ನು ಅವರ ಮಾತುಗಳಲ್ಲೇ ಆಲಿಸಿದ ಸ್ವಾಮೀಜಿಯವರ ಒಬ್ಬ ಶಿಷ್ಯ ಕೇಳಿದ, "ಇದು ಕೇವಲ ನಿಮ್ಮ ಮನಸ್ಸಿನ ಅನಿಸಿಕೆ ಇರಬಹುದು; ಇಂತಹ ಮಾತು ಕೇಳಿದಂತೆ ಭಾಸವಾಗಿರಬಹುದು, ನಿಜವಾಗಿಯೂ ಶಬ್ದ ಉಂಟಾಯಿತೆಂದು ನಂಬುವುದು ಹೇಗೆ?" ಅದಕ್ಕೆ ಸ್ವಾಮೀಜಿ ಸರಳವಾಗಿ ಉತ್ತರಿಸಿದರು, "ನಾನು ಈ ಕಿವಿಗಳಿಂದಲೇ ಕೇಳಿದೆನಲ್ಲ." ಅನುಷ್ಠಾನ ವೇದಾಂತದ ಬಗ್ಗೆ ಐರೋಪ್ಯರಿಗೆ ಉಪನ್ಯಾಸ ನೀಡಿದ ಸ್ವಾಮೀಜಿ, ಶೋಪನ್‌ಹಾವರ್, ಕ್ಯಾಂಟ್ ಮೊದಲಾದ ಪಾಶ್ಚಾತ್ಯ ತತ್ತ್ವಶಾಸ್ತ್ರಜ್ಞರ ವಾದಸರಣಿಯನ್ನು ತಮ್ಮ ಹರಿತವಾದ ತರ್ಕದಿಂದ ಮುರಿದು ಎಸೆದ ಸ್ವಾಮೀಜಿ, ಈ ಸಂದರ್ಭದಲ್ಲಿ ಮಾತ್ರ ಮಗುವಿನಂತಾಗಿದ್ದರು. ಸ್ವಾಮೀಜಿಯ ವಿಶೇಷವೆಂದರೆ ಅಗತ್ಯವಿದ್ದಾಗ ಮಾತ್ರ ತಮ್ಮ ತರ್ಕವನ್ನು ಎಚ್ಚರಿಸಿಕೊಂಡು ಸುಲಭವಾಗಿ ನಿರಾಕರಿಸಲಾಗದ ವಾದಸರಣಿಯಲ್ಲಿ ಮುಂದಿಡುತ್ತಿದ್ದುದು. ಆದರೆ ತಮ್ಮಷ್ಟಕ್ಕೆ ತಾವೇ ಇರುವಾಗ ಕೊನೆ ಇಲ್ಲದ ಭಾವಸಮುದ್ರದಲ್ಲಿ ಸ್ವಚ್ಛಂದವಾಗಿ ಸ್ವಾಮೀಜಿ ವಿಹರಿಸುತ್ತಿದ್ದರು. ತಮಗೆ ಬಹು ಆಪ್ತರೆನಿಸಿದವರೊಡನೆ ಮಾತ್ರ ಈ ಎರಡು ಜಗತ್ತುಗಳ ನಡುವೆ ನಿಂತು ಅನುಭಾವದ ಮಾತುಗಳನ್ನಾಡುತ್ತಿದ್ದರು.

ಇಂತಹ ಒಂದು ವ್ಯಕ್ತಿತ್ವದ ದೃಷ್ಟಿಯಲ್ಲಿ 'ದೇವರು–ಧರ್ಮ' ಯಾವ ರೂಪ ತಾಳುತ್ತದೆ? ಸ್ವಾಮೀಜಿ ಧರ್ಮದ ಬಗ್ಗೆ ಹೇಳುವ ಈ ಮಾತುಗಳನ್ನು ಗಮನಿಸಬೇಕು: **"ಧರ್ಮ ಸತ್ಯವನ್ನು ಕಾಣಬಯಸುತ್ತದೆ ಮತ್ತು ಈ ನಿಟ್ಟಿನಲ್ಲಿ ಅದು ಮೊಟ್ಟಮೊದಲಿಗೆ ಕಂಡುಕೊಂಡಿದ್ದೇನೆಂದರೆ ಸತ್ಯವನ್ನು ಅರಿಯದ ಬದುಕು ಬದುಕೇ ಅಲ್ಲ."** ಹಾಗಾದರೆ ಈ ಸತ್ಯ ಯಾವುದು? ಅವರು ತಮ್ಮ ಜೀವನದ ಕೊನೆಯ ದಿನಗಳಲ್ಲಿ ಉದ್ಗರಿಸುತ್ತಿದ್ದ ಮಾತೆಂದರೆ, "ಬಂಧನ ಎಂಬುದು ಮಿಥ್ಯೆ; ಬಿಡುಗಡೆ ಎಂಬುದು ಭ್ರಾಂತಿ." 'ನೀನು ಸದಾ ಮುಕ್ತ' ಎಂಬ ವೇದಾಂತದ ಮಾತನ್ನು ಅವರು ಅನುಭವಿಸಿ ಹೇಳಿದ್ದು ಹೀಗೆ. ಆದರೆ ಭಾರತದ ಉದ್ದಗಲಕ್ಕೂ ಸಂಚರಿಸಿದಾಗ ಸಿಕ್ಕ ಪ್ರತಿಯೊಬ್ಬ ದರಿದ್ರವ್ಯಕ್ತಿಯೂ ಅವರಿಗೆ 'ನಾರಾಯಣ'ನಾಗಿ ಕಂಡ. "ತಾಯಿತಂದೆಯರನ್ನು, ಗುರುವನ್ನು ದೇವರೆಂದು ಕರೆಯುತ್ತೀರಿ. ಆದರೆ ನಾನು ಹೇಳುತ್ತೇನೆ, 'ದರಿದ್ರನೇ ನಾರಾಯಣ' " ಎಂದರು ಸ್ವಾಮೀಜಿ. ಹೀಗೆ ಹಸಿದ ಹೊಟ್ಟೆಗಳ ನಡುವೆ ದೀನನೊಬ್ಬ ದೇವರಾಗುತ್ತಾನೆ. ಹೊಟ್ಟೆ ತುಂಬಿದ ವಿದೇಶೀಯರಿಗೆ ಭಾರತದ ಸಂಸ್ಕೃತಿಯ ಆಳವನ್ನು ಪರಿಚಯ ಮಾಡಿಕೊಡುವಾಗ ತರ್ಕಬದ್ಧವಾಗಿ ಪ್ರತಿಪಾದಿಸುವ ದೇವರನ್ನು ಅವರ ಮನಸ್ಸಿಗೆ ನಾಟುವಂತೆ ಸ್ವಾಮೀಜಿ ಹೇಳುತ್ತಾರೆ. ತರ್ಕದ ಮೂಲಕ ಕಂಡುಕೊಳ್ಳಬಹುದಾದ ದೇವರು ಅಪರಿಪೂರ್ಣ ಎಂದು ಗುರುತಿಸುವ ಮುಂದುವರೆದ ಸಾಧಕರಿಗೆ ಅನುಭಾವ ದಿಂದ ಪಡೆಯಬಹುದಾದ ದೇವರನ್ನು ಕುರಿತು ಹೇಳುತ್ತಾರೆ. ರಾಮಕೃಷ್ಣರು ಹೇಳುತ್ತಿದ್ದ ದೃಷ್ಟಾಂತದಲ್ಲಿರುವ ತಾಯಿ ತನ್ನ ಮಕ್ಕಳ ಜೀರ್ಣಶಕ್ತಿಗೆ ಅನುಗುಣವಾಗಿ ಅಡುಗೆ ಮಾಡಿ ಬಡಿಸುವಂತೆ, ಸ್ವಾಮೀಜಿಯವರು ಸಹ ಕೇಳುಗರ ಮನೋಧರ್ಮಕ್ಕೆ ತಕ್ಕಂತೆ ಒಂದೇ ಸತ್ಯವನ್ನು ಅವರವರ ಮಟ್ಟಕ್ಕೆ ಅರ್ಥವಾಗುವಂತೆ ವಿವರಿಸುತ್ತಿದ್ದರು.

ಪ್ರಾಜ್ಞರೆನಿಸಿಕೊಂಡ ಅನೇಕರು ಕೇಳುವ ಪ್ರಶ್ನೆ ಎಂದರೆ ಇಂದ್ರಿಯಗ್ರಾಹ್ಯವಾದ ಈ ಪ್ರಪಂಚವನ್ನು ನಮ್ಮ ಇಂದ್ರಿಯಗಳಿಂದ ಗ್ರಹಿಸಿದ್ದೇವೆ; ಈ ಪ್ರಪಂಚದಲ್ಲಿ ಇತರರಿಗೆ ಒಳ್ಳೆಯದನ್ನು ಮಾಡುತ್ತ ಬದುಕಿದರೆ ಸಾಲದೆ, ಇಂದ್ರಿಯಾತೀತ ಸತ್ಯದ ಬಗ್ಗೆ ತಲೆಕೆಡಿಸಿಕೊಳ್ಳುವ ಅಗತ್ಯವಾದರೂ ಏನು? – ಇದೇ ಪ್ರಶ್ನೆಯನ್ನು ಸ್ವಾಮೀಜಿಯವರು ಪ್ರಸ್ತಾಪಿಸುತ್ತಾ, ಧರ್ಮ ಎಂಬುದು ಈ ಇಂದ್ರಿಯಗ್ರಾಹ್ಯ ಪ್ರಪಂಚಕ್ಕೆ ಮಾತ್ರ ಸೀಮಿತವಾದುದಲ್ಲ, ನಿಜವಾಗಿಯೂ ಧರ್ಮದ ಸಾರ ಇರುವುದು